**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक-संस्कृत-विश्वविद्यालय:**
श्री चामराजेन्द्र संस्कृत महाविद्यालयस्य परिसर:
पम्पमहाकविमार्ग:, चामराजपेटे, बेङ्गलूरु – ५६००१८.

**ಪ್ರಸ್ತಾವನೆ:**

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತೃತೀಯ ದೀಕ್ಷಾಂತ ಘಟಿಕೋತ್ಸವವನ್ನು ನಡೆಸಲು ನಿಶ್ಚಯಿಸಲಾಗಿದೆ. 28.01.2014 ರಂದು ನಡೆದ 18ನೇ ಪ್ರಶಾಸನ ಸಮಿತಿ ಸಭೆಯು ಅನುಮೋದನೆ ನೀಡಿರುವ ಹಿನ್ನೆಲೆಯಲ್ಲಿ ತೃತೀಯ ದೀಕ್ಷಾಂತ ಘಟಿಕೋತ್ಸವ ಆಯೋಜಿಸಲು ನಿರ್ಣಯಿಸಲಾಗಿದೆ. 2012–13ನೇ ಸಾಲಿನಲ್ಲಿ ಆಯಾಯ ಶಾಸ್ತ್ರಗಳಲ್ಲಿ ಸರ್ವೋನ್ನತ ಶ್ರೇಣಿ ಪಡೆದ ವಿದ್ಯಾರ್ಥಿಗಳನ್ನು ಪುರಸ್ಕರಿಸಿ, ಬಿ. ಎ. ಸಂಸ್ಕೃತ/ ವೇದ ವಿದ್ವನ್ಮಧ್ಯಮಾ , ಎಂ. ಎ. ಸಂಸ್ಕೃತ/ ವೇದ ವಿದ್ವದುತ್ತಮಾ ಹಾಗೂ 2012–13ನೇ ಸಾಲಿನಲ್ಲಿ ಎಂ ಫಿಲ್(ವಿಶಿಷ್ಟಾಚಾರ್ಯ) ಪದವಿ ಪಡೆದ ವಿದ್ಯಾರ್ಥಿಗಳಿಗೆ ಪದವಿಪ್ರದಾನವನ್ನು ಮಾಡಲು ಕ್ರಮವಹಿಸಬೇಕಾಗಿದೆ. 2012–13ನೇ ಸಾಲಿನ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಘಟಿಕೋತ್ಸವ ಪ್ರಮಾಣಪತ್ರವನ್ನು ನೀಡಬೇಕಾದ ಹಿನ್ನೆಲೆಯಲ್ಲಿ ಈ ಅಧಿಸೂಚನೆಯನ್ನು ಹೊರಡಿಸಿದೆ.

## ಅಧಿಸೂಚನೆ

**ಸಂಖ್ಯೆ: ಕಸಂವಿ/ತೃ.ದೀ.ಘ/2013–14** **ದಿನಾಂಕ : 29.01.2014**

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ ತೃತೀಯ ದೀಕ್ಷಾಂತ ಘಟಿಕೋತ್ಸವನ್ನು ನೆರವೇರಿಸಲು ನಿರ್ಣಯಿಸಿದೆ. ಆದಕಾರಣ 2012–13ನೇ ಸಾಲಿನಲ್ಲಿ ಉತ್ತೀರ್ಣರಾದ ಬಿ. ಎ. ಸಂಸ್ಕೃತ/ವೇದ ವಿದ್ವನ್ಮಧ್ಯಮಾ, ಎಂ.ಎ.ಸಂಸ್ಕೃತ/ವೇದ ವಿದ್ವದುತ್ತಮಾ ವಿದ್ಯಾರ್ಥಿಗಳು ಹಾಗೂ 2012–13ನೇ ಸಾಲಿನಲ್ಲಿ ಎಂ.ಫಿಲ್(ವಿಶಿಷ್ಟಾಚಾರ್ಯ) ಪದವಿ ಪಡೆದ ವಿದ್ಯಾರ್ಥಿಗಳು ವಿಶ್ವವಿದ್ಯಾಲಯದಿಂದಾಗಲೀ, ಕಾಲೇಜಿನ ಪ್ರಾಚಾರ್ಯರಿಂದಾಗಲೀ ಅಥವಾ ವೆಬ್‌ಸೈಟ್‌ನಿಂದಾಗಲೀ ಅರ್ಜಿಯನ್ನು ಪಡೆದು 500.ರೂಗಳ ನಿಗದಿತ ಶುಲ್ಕದೊಂದಿಗೆ ಭರ್ತಿಮಾಡಿದ ಅರ್ಜಿಯನ್ನು ತಮ್ಮ ಕಾಲೇಜಿನ ಮುಖಾಂತರ ಫೆಬ್ರವರಿ 28ರ ಒಳಗೆ ವಿಶ್ವವಿದ್ಯಾಲಯಕ್ಕೆ ಸಲ್ಲಿಸಲು ಈ ಮೂಲಕ ಸೂಚಿಸಿದೆ.

ಆದೇಶದ ಮೇರೆಗೆ,

s/d

**ಕುಲಸಚಿವರು**

**ಪ್ರತಿಗಳು: 1. ರಾಜ್ಯದ ಎಲ್ಲಾ ಸಂಸ್ಕೃತ ಕಾಲೇಜುಗಳ ಪ್ರಾಚಾರ್ಯರಿಗೆ,**
**2. ರಕ್ಷತಾ ಪ್ರತಿ**